

# ರೋಗದ ನಿಖರ ಪತ್ತೆಗೆ ಬಯಾಪ್ಸಿ

**ದೇಹದ ವಿವಿಧ ಭಾಗಗಳಲ್ಲಿ ಉಂಟಾಗುವ ಗಡ್ಡೆ ಕ್ಯಾನ್ಸರ್‌ಕಾರಕವೇ ಅಥವಾ ಇಲ್ಲವೇ ಎಂಬುದನ್ನು ಪತ್ತೆ ಹಚ್ಚಲು ಸ್ಕ್ಯಾನಿಂಗ್ ಅಲ್ಲದೆ ಬಯಾಪ್ಸಿ ಎಂಬ ಪ್ರಯೋಗಾಲಯ ತಂತ್ರಜ್ಞಾನ ಹೆಚ್ಚು ಬಳಕೆಯಲ್ಲಿದೆ. ಗಡ್ಡೆ ಯಾವ ಬಗೆಯದು ಎಂಬುದನ್ನು ಬಯಾಪ್ಸಿಯಿಂದ ನಿಖರವಾಗಿ ತಿಳಿಯಲು ಸಾಧ್ಯ.**

■ ಡಾ. ವಿನಯ ಶ್ರೀನಿವಾಸ್

ಆರೋಗ್ಯ ಸಮಸ್ಯೆಯ ಭಾಗವಾಗಿ ಶರೀರದ ಯಾವುದೇ ಭಾಗದಲ್ಲಿ ಗಡ್ಡೆಗಳು ಅಥವಾ ಹುಣ್ಣುಗಳು (ಅಲ್ಸರ್) ಕಾಣಿಸಿಕೊಳ್ಳಬಹುದು. ಅದಕ್ಕೆ ಕಾರಣಗಳು ಹಲವಾರು. ಮುಖ್ಯವಾದ ಕಾರಣಗಳೆಂದರೆ ವಿವಿಧ ಬಗೆಯ ಸೋಂಕು, ಗ್ರಂಥಿಗಳ ಕಾರ್ಯಕ್ಷಮತೆಯಲ್ಲಿ ವ್ಯತ್ಯಯ, ದೋಷಪೂರಿತ ಕೊಬ್ಬು ಅಥವಾ ನಾರಿನಂತಿರುವ ಅಂಗಾಂಶ ಸಂಗ್ರಹವಾಗುವುದು, ಆನುವಂಶೀಯತೆ, ಜಠರ, ಅನ್ನನಾಳ ಮತ್ತು ಕರುಳುಗಳ ಜೀವಕೋಶಗಳಲ್ಲಿ ದೋಷವಿದ್ದಾಗ, ಅತಿಯಾದ ತಂಬಾಕು ಸೇವನೆಯಿಂದ ಹೀಗೆ ಹಲವಾರು ಕಾರಣಗಳಿಂದಾಗಿ ಯಾವುದೇ ಅಂಗಾಂಗಗಳಲ್ಲಿ ಗಡ್ಡೆ ಅಥವಾ ಹುಣ್ಣು ಆಗಬಹುದು. ಕೆಲವು ಶರೀರದ ಮೇಲ್ಭಾಗದಲ್ಲಿದ್ದು ಕಣ್ಣಿಗೆ ಕಂಡರೆ ಇನ್ನು ಕೆಲವು ದೇಹದ ಒಳಗಿನ ಅಂಗಾಂಗಗಳಲ್ಲಿದ್ದು ವ್ಯಕ್ತಿಯನ್ನು ಬಾಧಿಸಬಹುದು. ಮಹಿಳೆಯರಲ್ಲಿ ಸ್ತನಗಳಲ್ಲಿಯೂ ಗಡ್ಡೆಗಳು ಕಾಣಿಸಿಕೊಳ್ಳುವುದಿದೆ. ಇದಕ್ಕೆ ಮುಖ್ಯ ಕಾರಣ ಅಂಡಾಶಯಗಳು ಸ್ರವಿಸುವ ಮಾಸಿಕ ರಸದೂತಗಳ ವ್ಯತ್ಯಾಸ. ಆದರೆ ಒಮ್ಮೊಮ್ಮೆ ಗಡ್ಡೆಗಳು ಕ್ಯಾನ್ಸರ್‌ನಿಂದಾಗಿಯೂ ಇರಬಹುದು.

ಇಂತಹ ಸಮಸ್ಯೆ ಕಾಣಿಸಿಕೊಂಡಾಗ ವ್ಯಕ್ತಿ ಮೊದಲು ಶಸ್ತ್ರಚಿಕಿತ್ಸಾ ತಜ್ಞರಲ್ಲಿ ಸಲಹೆ ಪಡೆಯಲು ಧಾವಿಸುತ್ತಾನೆ. ತಜ್ಞರು ಗಡ್ಡೆ ಇರುವ ದೇಹದ ಭಾಗ, ಗಡ್ಡೆಯ ಬಣ್ಣ, ಅದರ ಗಾತ್ರ, ಸ್ವರೂಪ, ಅದು ಆರಂಭವಾದ ರೀತಿ, ವ್ಯಕ್ತಿಯನ್ನು ಬಾಧಿಸುವ ಇತರ ಗುಣಲಕ್ಷಣಗಳು (ನೋವು, ಜ್ವರ, ಹಸಿವು ಮತ್ತು ದೇಹದ ತೂಕ ಕಡಿಮೆಯಾಗುವುದು) ಮೊದಲಾದ ಅಂಶಗಳನ್ನು ಗಮನಿಸುತ್ತಾರೆ. ಈ ಗುಣಲಕ್ಷಣಗಳ ಆಧಾರದ ಮೇಲೆಯೇ ಶೇ. ಎಪ್ಪತ್ತರಷ್ಟು ಸಂದರ್ಭಗಳಲ್ಲಿ ಗಡ್ಡೆ ಯಾವ ಬಗೆಯದ್ದು ಎಂಬುದನ್ನು ಬಹುತೇಕ ಪತ್ತೆ ಹಚ್ಚಬಹುದು. ಕೆಲವೊಮ್ಮೆ ಚಿಕಿತ್ಸೆಯನ್ನೂ ಸೂಚಿಸಬಹುದು.

ಆದರೆ ಕೆಲವೊಮ್ಮೆ ಕೇವಲ ಕೈ ಪರೀಕ್ಷೆಯಿಂದ ಗಡ್ಡೆ ಎಂತಹದ್ದು ಎಂದು ನಿಖರವಾಗಿ ಪತ್ತೆ ಹಚ್ಚಲು ಕಷ್ಟ. ಅಂತಹ ಸನ್ನಿವೇಶಗಳಲ್ಲಿ ವೈದ್ಯರು ಸೂಜಿ ಪರೀಕ್ಷೆ (ಎಫ್‌ಎನ್‌ಎಸಿ) ಅಥವಾ ಬಯಾಪ್ಸಿ ಪರೀಕ್ಷೆಯನ್ನು ಸೂಚಿಸಬಹುದು. ಬಯಾಪ್ಸಿ ಎಂದರೆ ಸಣ್ಣ ಶಸ್ತ್ರಚಿಕಿತ್ಸಾ ಪ್ರಕ್ರಿಯೆಯ ಮೂಲಕ ಗಡ್ಡೆಯ ತುಣುಕನ್ನಷ್ಟೇ ಅಥವಾ ಪೂರ್ತಿ ಗಡ್ಡೆಯನ್ನು ದೇಹದಿಂದ ಬೇರ್ಪಡಿಸಿ ಪ್ರಯೋಗಾಲಯಕ್ಕೆ ತಪಾಸಣೆಗೆ ಕಳುಹಿಸುವುದು. ಗಡ್ಡೆ ಇರುವ ಭಾಗ ಮತ್ತು ಗಾತ್ರದ ಆಧಾರದ ಮೇಲೆ ಶಸ್ತ್ರಚಿಕಿತ್ಸೆ ಸರಳ ಅಥವಾ ಸಂಕೀರ್ಣವಾಗಿರುತ್ತದೆ.